ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: ಸಿ3(7)ಪ್ರಾ.ಶಿ. ವರ್ಗ–01/2016–17 ದಿನಾಂಕ: 10.08.2016

**: ಜ್ಞಾಪನ :**

ವಿಷಯ:– 2016–17 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿಗಳು–ಮುಂದುವರೆದ ಸೂಚನೆಗಳು:

ಉಲ್ಲೇಖ 1. ಈ ಕಛೇರಿಯ ಸಮಸಂಖ್ಯೆ **ಜ್ಞಾಪನ** ದಿನಾಂಕ: 01–08–2016

2. ದಿನಾಂಕ: 09–08–2016 ರಂದು ವರ್ಗಾವಣೆ ಸಂಬಂಧ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿನ ಸೂಚನೆಗಳ ಪ್ರಕಾರ.

**** ***** ****

ವಿಷಯದನ್ವಯ, ಉಲ್ಲೇಖ–2 ರಲ್ಲಿ ಪ್ರಸ್ತಾಪಿಸಿರುವ ಸಭೆಯ ಸೂಚನೆಗಳನ್ನು ಮುಂದುವರೆಸುತ್ತಾ/ ವರ್ಗಾವಣಾ ಅರ್ಜಿಗಳನ್ನು ಆನ್–ಲೈನ್ ಮುಖಾಂತರವಾಗಿ ಸಲ್ಲಿಸುವ ಶಿಕ್ಷಕರ ಅರ್ಜಿ ವಿವರಗಳಲ್ಲಿ ಯಾವುದೇ ಮಾರ್ಪಾಡನ್ನು ಮಾಡಬಯಸುವ ಶಿಕ್ಷಕರ ಪ್ರಕರಣಗಳಲ್ಲಿ ಸದರಿ ಶಿಕ್ಷಕರಿಂದ ಸೂಕ್ತವಾದ ದೃಢೀಕೃತ ದಾಖಲೆಗಳನ್ನು ಪಡೆದು ಪರಿಶೀಲಿಸಿ ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ತಂತ್ರಾಂಶದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳ ಲಾಗಿನ್ ಮುಖಾಂತರವಾಗಿ ದಿನಾಂಕ: 14–08–2016 ಮಾರ್ಪಾಡುಗಳನ್ನು ಅಳವಡಿಸಲು ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ವಿಷಯವನ್ನು ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಪ್ರಚುರಪಡಿಸತಕ್ಕದ್ದು.

(ಸೋಮಸುಂದರ್, ಭಾ.ಆ.ಸೇ)
ಆಯುಕ್ತರು

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ: ಸಿ3(2)ಪ್ರಾ..ಶಾ.ಶಿ. ಹೆ.ಹು.ಸ್ಥ 02/2016–17

ದಿನಾಂಕ: 10.08.2016

**: ಜ್ಞಾಪನ :**

ವಿಷಯ:– ಶಿಕ್ಷಕರ ಸಂಪನ್ಮೂಲದ ಸಮರ್ಪಕ ಬಳಕೆ/ಮರುನಿಯುಕ್ತಿ ಕ್ರಮಗಳ ಕುರಿತು ನೀಡಲಾದ ಸೂಚನೆಗಳನ್ನು ಪಾಲಿಸುವ ಕುರಿತು:

ಉಲ್ಲೇಖ 1) ಈ ಕಛೇರಿಯ ಪತ್ರ ಸಮಸಂಖ್ಯೆ ದಿನಾಂಕ: 02–07–2016 ರಂದು ಮತ್ತು ನಂತರದಲ್ಲಿ ನೀಡಲಾದ ಸೂಚನೆಗಳ ಪ್ರಕಾರ.

2 ದಿನಾಂಕ: 09–08–2016 ರಂದು ವರ್ಗಾವಣೆ ಸಂಬಂಧ ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿನ ಸೂಚನೆಗಳ ಪ್ರಕಾರ.

**** ***** ****

ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಾಗೂ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ ಅನುಸಾರವಾಗಿ ಶಿಕ್ಷಕರನ್ನು ಒದಗಿಸುವ ನಿಟ್ಟಿನಲ್ಲಿ ಉಲ್ಲೇಖಿತ (1)ರ ಪತ್ರಗಳಲ್ಲಿ ಹಲವು ಸೂಚನೆಗಳನ್ನು ನೀಡಲಾಗಿತ್ತು. ಶಾಲಾವಾರು ಶಿಕ್ಷಕರ ಅಗತ್ಯತೆಯನ್ನು ಮತ್ತು ಹೆಚ್ಚುವರಿಯಾಗಿರುವ ಹಾಗೂ ಕೊರತೆ ಇರುವ ಶಿಕ್ಷಕರ ಸಂಖ್ಯೆಯನ್ನು ಈಗಾಗಲೇ ಉಲ್ಲೇಖಿತ(1)ರ ಪತ್ರಗಳ ಸೂಚನೆಗಳ ಸಂವಾದಿಯಾಗಿ ಒದಗಿಸಲಾಗಿದ್ದ ಎಕ್ಸೆಲ್ ಮಾದರಿ ಮಾಹಿತಿ ನಮೂನೆಯಲ್ಲಿ ನಿರ್ದಿಷ್ಟಪಡಿಸಲಾಗಿತ್ತು. ಈಗಾಗಲೇ ಎಲ್ಲ ಜಿಲ್ಲೆಗಳಲ್ಲಿ ಸ್ಥಳನಿಯುಕ್ತಿ ಕ್ರಮಗಳು ಪೂರ್ಣಗೊಂಡಿರುತ್ತದೆ. ಆದರೆ ಸ್ಥಳನಿಯುಕ್ತಿಗೊಳಿಸಲಾದ ಎಲ್ಲಾ ಶಿಕ್ಷಕರನ್ನು ಬಿಡುಗಡೆಗೊಳಿಸಲಾಗಿಲ್ಲ ಎಂಬುದಾಗಿ ವರದಿ ಇದೆ. ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದೆ. ದಿನಾಂಕ: 09–08–2016 ರ ಸಭೆಯಲ್ಲಿಯೂ ಸಹ ಇದೇ ವಿಷಯದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳ ಮುಖಾಂತರವಾಗಿ ಸ್ಪಷ್ಟವಾದ ಸೂಚನೆಗಳನ್ನು ನೀಡಲಾಗಿದೆ. ಮರು ನಿಯುಕ್ತಿಗೊಳಿಸಲಾದ ಶಿಕ್ಷಕರುಗಳನ್ನು ಹೆಚ್ಚುವರಿಯಾದ ಶಾಲೆಯಿಂದ ಬಿಡುಗಡೆಗೊಳಿಸಲು ದಿನಾಂಕ: 10–08–2016ರ ಅಂತಿಮ ಗಡುವನ್ನು ನೀಡಲಾಗಿದ್ದು ಮರು ನಿಯುಕ್ತಿಗೊಂಡ ಎಲ್ಲಾ ಶಿಕ್ಷಕರ ವೇತನವನ್ನು ಹೆಚ್ಚುವರಿಗೊಂಡ ಶಾಲೆಯಲ್ಲಿ ದಿನಾಂಕ: 11–08–2016 ರಿಂದ ಸೆಳೆಯುವಂತಿಲ್ಲ ಎಂಬುದಾಗಿ ಎಚ್ಚರಿಸಿದೆ. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೇ ನೇರಹೊಣೆಗಾರರನ್ನಗಿಸಲಾಗುವುದು.

(ಸೌಜನ್ಯ, ಭಾ.ಆ.ಸೇ)
ಆಯುಕ್ತರು

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(2)ಪ್ರಾ..ಶಾ.ಶಿ. ಹೆ.ಹು.ಸ್ಥ 02/2016-17

ದಿನಾಂಕ: 10.08.2016

**: ಜ್ಞಾಪನ-2 :**

ವಿಷಯ:- ಶಿಕ್ಷಕರ ಸಂಪನ್ಮೂಲದ ಸಮರ್ಪಕ ಬಳಕೆ/ಮರುನಿಯುಕ್ತಿ ಕ್ರಮಗಳ ಕುರಿತು ನೀಡಲಾದ ಸೂಚನೆಗಳನ್ನು ಪಾಲಿಸುವ ಕುರಿತು- ಮರು ನಿಯುಕ್ತಿಗೊಂಡ ಶಿಕ್ಷಕರ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ:

ಉಲ್ಲೇಖ 1. ಈ ಕಛೇರಿಯ ಪತ್ರ ಸಮಸಂಖ್ಯೆ ದಿನಾಂಕ: 02-07-2016 ರಂದು ಮತ್ತು ನಂತರದಲ್ಲಿ ನೀಡಲಾದ ಸೂಚನೆಗಳ ಪ್ರಕಾರ.

2. ದಿನಾಂಕ: 09-08-2016 ರಂದು ವರ್ಗಾವಣೆ ಸಂಬಂಧ ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿನ ಸೂಚನೆಗಳ ಪ್ರಕಾರ.

**** ***** ****

ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಶಾಲೆಯಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಾಗೂ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ ಅನುಸಾರವಾಗಿ ಶಿಕ್ಷಕರನ್ನು ಒದಗಿಸುವ ನಿಟ್ಟಿನಲ್ಲಿ ಉಲ್ಲೇಖಿತ (1)ರ ಪತ್ರಗಳಲ್ಲಿ ಹಲವು ಸೂಚನೆಗಳನ್ನು ನೀಡಲಾಗಿತ್ತು. ಶಾಲಾವಾರು ಶಿಕ್ಷಕರ ಅಗತ್ಯತೆಯನ್ನು ಮತ್ತು ಹೆಚ್ಚುವರಿಯಾಗಿರುವ ಹಾಗೂ ಕೊರತೆ ಇರುವ ಶಿಕ್ಷಕರ ಸಂಖ್ಯೆಯನ್ನು ಈಗಾಗಲೇ ಉಲ್ಲೇಖಿತ(1)ರ ಪತ್ರಗಳ ಸೂಚನೆಗಳ ಸಂವಾದಿಯಾಗಿ ಒದಗಿಸಲಾಗಿದ್ದ ಎಕ್ಸೆಲ್ ಮಾದರಿ ಮಾಹಿತಿ ನಮೂನೆಯಲ್ಲಿ ನಿರ್ದಿಷ್ಟಪಡಿಸಲಾಗಿತ್ತು. ಈಗಾಗಲೇ ಎಲ್ಲ ಜಿಲ್ಲೆಗಳಲ್ಲಿ ಸ್ಥಳನಿಯುಕ್ತಿ ಕ್ರಮಗಳು ಪೂರ್ಣಗೊಂಡಿರುತ್ತದೆ. ಮತ್ತು ಆ ಎಲ್ಲಾ ಮರು ನಿಯುಕ್ತಿಗೊಂಡ ಶಿಕ್ಷಕರನ್ನು ಹೆಚ್ಚುವರಿಯಾದ ಶಾಲೆಯಿಂದ ಬಿಡುಗಡೆಗೊಳಿಸಲು ದಿನಾಂಕ: 10-8-2016 ರ ಅಂತಿಮ ಗಡುವನ್ನು ನೀಡಲಾಗಿರುತ್ತದೆ. ಸದರಿ ಎಲ್ಲಾ ಮರು ನಿಯುಕ್ತಿಗೊಳಿಸಲಾದ ಶಿಕ್ಷಕರ ವಿವರಗಳನ್ನು ದಿನಾಂಕ: 11-08-2016 ರ ಒಳಗೆ ತಂತ್ರಾಂಶದಲ್ಲಿ ಭರ್ತಿ ಮಾಡತಕ್ಕದ್ದು ಮತ್ತು ಈ ಕಛೇರಿಗೆ ವರದಿ ಮಾಡತಕ್ಕದ್ದು ತಂತ್ರಾಂಶದಲ್ಲಿ ಅಗತ್ಯ ಮಾಹಿತಿಯನ್ನು ನಿಗದಿಗೊಳಿಸಲಾದ ಗಡುವಿನೊಳಗೆ ಭರ್ತಿ ಮಾಡದಿದ್ದ ಪಕ್ಷದಲ್ಲಿ ಇದು ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರ ಕರ್ತವ್ಯಲೋಪವೆಂದು ಪರಿಗಣಿಸಲಾಗುತ್ತದೆ ಎಂಬುದಾಗಿ ಎಚ್ಚರಿಸಿದೆ.

(ಸೌಜನ್ಯ. ಭಾ.ಆ.ಸೇ)
ಆಯುಕ್ತರು

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ.